**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **05.12.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರಃ ಶ್ರೀ   ಹೆಚ್.ಕೆ.ಎನ್. ವಕೀಲರಿಂದ:**

ಕನಕಪುರ ತಾಲ್ಲೂಕು ಪಡವಲಗೆರೆ ಗ್ರಾಮದ ವ್ಯಕ್ತಿಯ ಜೊತೆ ನನ್ನ ವಿವಾಹ ಅಗಿರುತ್ತದೆ. ನಾವು ಬೆಂಗಳೂರಿನಲ್ಲಿ 10 ವರುಷಗಳಿಂದ ವಾಸವಿರುತ್ತೇವೆ. ನನ್ನ ತಾಯಿ ನಂದೀಪುರ ಗ್ರಾಮದವರಾಗಿರುತ್ತಾರೆ. ನನ್ನ ತಾಯಿಯು ಅಚಲಗ್ರಾಮದ ಗಿರೀಗೌಡ ಎಂಬುವವರ ಜೊತೆ ವಿವಾಹವಾಗಿದ್ದು,ಈಗ ನಂದೀಪುರ ಗ್ರಾಮದಲ್ಲಿ ವಾಸವಿರುತ್ತಾರೆ. ಮದುವೆಯಾದ ದಿನದಿಂದಲೂ ಅವರು ನಂದೀಪುರ ಗ್ರಾಮದಲ್ಲಿ ವಾಸವಿರುತ್ತಾರೆ.  ಅವರಿಗೆ ಸೇರಿದಂತೆ ಅಚಲಗ್ರಾಮದಲ್ಲಿ ಜಮೀನುಗಳು ಇರುವುದಿಲ್ಲ. ನನ್ನ ತಂದೆ ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದರು. ನನ್ನ ತಂದೆಯು ಸರ್ವೆ ನಂ.75/4 ರಲ್ಲಿ 1 ಎಕರೆ ಸ್ವತ್ತನ್ನು ಮಾದೇಗೌಡ ಎಂಬುವವರಿಂದ ಕ್ರಯಕ್ಕೆ ಪಡೆದಿದ್ದರು.  ಯಾವ ವರುಷದಲ್ಲಿ ಖರೀದಿ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ವಾದಿಯ ಊರು ಸಹ ನಂದೀಪುರ ಗ್ರಾಮ ಎಂದರೆ ಸರಿ. ವಾದಿಯು ಅರೋಗ್ಯವಾಗಿ ಇರುತ್ತಾರೆ ಎಂದರೆ ಸರಿಯಲ್ಲ. ಅವರಿಗೆ ಪಾರ್ಶ್ವವಾಯು ಅಗಿದ್ದು, ಈ ಸಂಬಂದವಾಗಿ ದಾಖಲೆ ಹಾಜರುಪಡಿಸಿರುವುದಿಲ್ಲ. ಸದರಿಯವರು ತಮಿಳುನಾಡಿನಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಸದರಿಯವರಿಗೆ ತಿರುಗಾಡಲು ಅಗುವುದಿಲ್ಲ. ಹೊರಗಡೆ ಬರಬೇಕಾದರೆ ಕಾರಿನ ಮೂಲಕ ಕರೆದುಕೊಂಡು ಬರಬೇಕಾಗಿರುತ್ತದೆ.  ಅವರಿಗೆ ಮಾತನಾಡಲು ಅಗುತ್ತಿಲ್ಲ. ಅವರಿಗೆ ಪಾರ್ಶ್ವವಾಯು ಅಗಿ ಮಾತು ನಿಂತು ಹೋಗಿ 1 ವರುಷಗಳು ಕಳೆದಿರುತ್ತದೆ.  ನನಗೆ ಜಿ.ಪಿ.ಎ. ಕೊಟ್ಟ ಅವದಿಯಲ್ಲಿ ವಾದಿಗೆ  ಪಾರ್ಶ್ವವಾಯು ಅಗಿತ್ತು. ಸದರಿ ಕಾಲಕ್ಕೆ ಅವರಿಗೆ ಮಾತನಾಡಲು ಅಗುತ್ತಿರಲಿಲ್ಲ ಮತ್ತು ಯೋಚನಾ ಶಕ್ತಿ ಇರಲಿಲ್ಲ ಎಂದರೆ ಸರಿ. ನಿಪಿ-1 ನ್ನು ಮಳವಳ್ಳಿಯಲ್ಲಿ ಮಾಡಿಕೊಟ್ಟಿದ್ದು, 2024 ರಲ್ಲಿ ಸದರಿ ದಾಖಲೆ ಅಗಿದ್ದು, ತಿಂಗಳು ಮತ್ತು ದಿನ ಗೊತ್ತಿರುವುದಿಲ್ಲ. ವಾದಿಯನ್ನು ಮಳವಳ್ಳಿಗೆ ನಾನೇ ಕರೆದುಕೊಂಡು ಬಂದಿದ್ದೆ. ನಿಪಿ-1 ರ ವಿಚಾರಗಳನ್ನು ನಾನೇ ಬರೆಸಿರುತ್ತೇನೆ.

2) ವಾದಿಗೆ 3 ಜನ ಮಕ್ಕಳು ಇರುತ್ತಾರೆ. ಅವರು ಮಕ್ಕಳ ಜೊತೆ ಅನೋನ್ಯವಾಗಿ ಇರುತ್ತಾರೆ. ವಾದಿಯ ಮಗನು 2 ವರುಷಗಳ ಹಿಂದೆ ಮೃತರಾಗಿರುತ್ತಾರೆ. ಅವರಿಗೆ ಮದುವೆಯಾಗಿ ವಿಚ್ಚೇದನ ಅಗಿದ್ದು, ಅವರಿಗೆ ಮಕ್ಕಳು ಇರುವುದಿಲ್ಲ. ಆ ರೀತಿ ವಿಚ್ಚೇದನ ಯಾವಾಗ ಅಗಿದೆ ಎಂದು ಗೊತ್ತಿರುವುದಿಲ್ಲ.  ನಿಪಿ-1 ಅದಾಗ ನಾನು ನಮ್ಮ ಊರಿನ ಹೆಸರನ್ನು ನೀಡಿರುತ್ತೇನೆ. ವಾದಿಗೆ ಪಾರ್ಶ್ವವಾಯು ಅಗಿರುವ ಕಾರಣ ಅವರು ನ್ಯಾಯಾಲಯಕ್ಕೆ ಬರಲು ಸಾದ್ಯವಿರುವುದಿಲ್ಲ  ಎಂದು ನಿಪಿ-1 ರಲ್ಲಿ ಬರೆಸಿರುತ್ತೇನೆ. ವಾದಿಯು ಅಧಿಕಾರ ಪತ್ರವನ್ನು ತನ್ನ ಮಕ್ಕಳಿಗೆ ನೀಡಬಹುದಾಗಿತ್ತು ನಾನು

ಉದ್ದೇಶಪೂರ್ವಕವಾಗಿ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ದಾವೆಯನ್ನು ನಡೆಸಲು ಇಷ್ಟ ಇಲ್ಲದೆ ಇದ್ದರು ನಾನು ನಿಪಿ-1 ನ್ನು ದುರುದ್ದೇಶದಿಂದ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ದಾವೆಯನ್ನು ಸಲ್ಲಿಸಲು ಇಷ್ಟ ಇಲ್ಲದೇ ಇದ್ದರು ದಾವಾ ಸ್ವತ್ತುಗಳನ್ನು ನಾನು ಲಪಟಾಯಿಸಲು ಅವರ ಮೂಲಕ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ಸಾಕ್ಷಿದಾರರು ನ್ಯಾಯಾಲಯದ ಹತ್ತಿರ ಬಂದಿದ್ದಾಗ ನಿಪಿ-1ಕ್ಕೆ ಸಹಿ ಪಡೆದಿರುತ್ತೇವೆ. ನಿಪಿ-1 ನ್ನು ಸೃಷ್ಟಿ ಮಾಡಿ ನನಗೆ ಬೇಕಾದವರ ಮೂಲಕ ಸಾಕ್ಷಿ ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ.

3) ವಾದಿಗೆ ನಂದೀಪುರ ಗ್ರಾಮದಲ್ಲಿ ಒಟ್ಟು 6 ಎಕರೆ ಜಮೀನು ಇರುತ್ತದೆ. ಅದರಲ್ಲಿ ಎರಡು ಜಮೀನು ಮಾತ್ರ ವಾದಿಯ ಹೆಸರಿನಲ್ಲಿ ಇರುತ್ತದೆ. ಸದರಿ ಎರಡು ಜಮೀನುಗಳು ಸರ್ವೆ ನಂ.75/2 ಮತ್ತು 75/3 ಅಗಿರುತ್ತದೆ. ಉಳಿದ ಸ್ವತ್ತುಗಳು ತಾತ, ಮುತ್ತಾತನ ಹೆಸರಿನಲ್ಲಿ ಇರುತ್ತವೆ. ಸದರಿ ಜಮೀನುಗಳ ಖಾತೆಯನ್ನು ಬದಲಾವಣೆ ಮಾಡಿಸಲು ನಾನು ಸಹಾಯ ಮಾಡಿರುವುದಿಲ್ಲ. ನನ್ನ ತಂದೆ ತಾಯಿಯು ಮಾದೇಗೌಡ ರವರಿಂದ ಕ್ರಯಕ್ಕೆ ಪಡೆದ ಮನೆಯಲ್ಲಿ ವಾಸವಿರುತ್ತಾರೆ. ಸದರಿ ಮಾದೇಗೌಡ ರವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಯಾವ ವರುಷದಲ್ಲಿ, ಎಷ್ಟು ಮೊತ್ತಕ್ಕೆ ಆ ರೀತಿ ಕ್ರಯಕ್ಕೆ ಪಡೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನನ್ನ ತಂದೆ ತಾಯಿಯು ವಾದಿಗೆ ಸೇರಿದ ನಂದೀಪುರ ಗ್ರಾಮದ ಮನೆಯಲ್ಲಿ ವಾಸವಾಗಿದ್ದು, ಅವರಿಗೆ ಸೇರಿದ ಸ್ವಂತ ಮನೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯು ವಾದಿಗೆ ಸೇರಿದ ಜಮೀನಿನಲ್ಲಿ ವ್ಯವಸಾಯ ಮಾಡಿ ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

4) ಪ್ರತಿವಾದಿಯು ನನಗೆ ಚಿಕ್ಕಮ್ಮ ಅಗಬೇಕು. ಅವರು ಎಲವಳ್ಳಿ ಗ್ರಾಮದ ವ್ಯಕ್ತಿಯ ಜೊತೆ ವಿವಾಹ ಅಗಿರುತ್ತಾರೆ. ವಾದಿಯು ಪ್ರತಿವಾದಿ ಜೊತೆ ಸ್ವಲ್ಪ ದಿನ ವಾಸ ಇದ್ದರು ಎಂದರೆ ಎಲ್ಲಾ ಮಕ್ಕಳ ಜೊತೆ ವಾಸವಿದ್ದರು. ವಾದಿಯು ಪ್ರತಿವಾದಿಯ ಜೊತೆ ವಾಸವಿದ್ದಾಗ ಅವರ ಯೋಗಕ್ಷೇಮವನ್ನು ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಆ ಕಾರಣದಿಂದ ಪ್ರೀತಿ ವಿಶ್ವಾಸದಿಂದ ವಾದಿಯು 2 ಜಮೀನುಗಳನ್ನು ದಾನ ಪತ್ರದ ಮೂಲಕ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಮೋಸದಿಂದ ಬರೆಸಿಕೊಂಡಿರುತ್ತಾರೆ. ವಾದಿಯು ಸ್ವತಃ ಇಚ್ಚೆಯಿಂದ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯ ಜೊತೆ ಜಗಳ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಸಂಬಂದವಾಗಿ ದೂರು ನೀಡಿರುತ್ತಾರೆ ಎಂದರೆ ಸರಿ. ನಾನು ಮತ್ತು ನಮ್ಮ ಕುಟುಂಬದವರು ಮೇಲೆ ಹೇಳಿದ ಸ್ವತ್ತುಗಳನ್ನು ಸ್ವಾದೀನಕ್ಕೆ ಪಡೆಯಲು ಪ್ರಯತ್ನಪಟ್ಟಗ ವಾದಿಯು ಪ್ರತಿವಾದಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂದೀಪುರ ಗ್ರಾಮದಲ್ಲಿ ನನ್ನ ತಂದೆ ತಾಯಿಗೆ ಯಾವುದೇ ಅಸ್ತಿ ಇಲ್ಲದೇ ಇದ್ದರು ಈ ಅಸ್ತಿಗಳನ್ನು ಕಬಳಿಸಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಸೇರಿದಂತೆ ನಂದೀಪುರ

ಗ್ರಾಮದಲ್ಲಿ ಪಿತ್ರಾರ್ಜಿತ ಸ್ವತ್ತು ಇರುವುದಿಲ್ಲ. ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದು ಹೇಳುವ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

5) ನನ್ನ ತಾಯಿ ಮತ್ತು ವಾದಿ ಸೇರಿ ಕೆಲವು ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ವಾದಿ ಮಾತ್ರ ಮಾರಾಟ ಮಾಡಿರುತ್ತಾರೆ. ಸದರಿ ದಾಖಲೆಗೆ ನನ್ನ ತಾಯಿ ಸಹಿ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ವಾದಿಯು ಯಾವ ಸ್ವತ್ತನ್ನು ಯಾರಿಗೆ ಯಾವ ಮೊತ್ತಕ್ಕೆ, ಯಾವಾಗ ಮಾರಾಟ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ವಾದಿಯು ಅವರ ಕುಟುಂಬಕ್ಕೆ ಸಂಬಂದಿಸಿದ ಸಂಗತಿಗಳನ್ನು ನನಗೆ ಹೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಿಕ್ಕ ವಯಸ್ಸಿನವಳಾಗಿ ಇದ್ದಾಗಲೇ ಮಾರಾಟ ಮಾಡಿರುತ್ತಾರೆ. ನಾನು ನಂದೀಪುರ ಗ್ರಾಮದಲ್ಲಿ ಹುಟ್ಟಿ ಬೆಳೆದಿರುತ್ತೇನೆ. ನನ್ನ ತಾಯಿ ವಾದಿ ಮನೆಗೆ ಹೋಗಿ ಬರುತ್ತಿದ್ದರು ಎಂದರೆ ಸರಿ. ನನ್ನ ತಾಯಿಗೆ ವಾದಿಯ ಕುಟುಂಬದ ವಿಚಾರಗಳು ಗೊತ್ತು ಎಂದರೆ ಸರಿ. ದಾನ ಪತ್ರದ ಸಂಬಂದವಾಗಿ ಏನು ಮಾತುಕತೆ ಅಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ದಾನಪತ್ರದ ವಿಚಾರ ನನ್ನ ತಾಯಿ ಮತ್ತು ವಾದಿಗೆ ಚೆನ್ನಾಗಿ ಗೊತ್ತು ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಮಾಡಿಸಲು ನನ್ನ ತಾಯಿಯನ್ನು ಕೇಳಿದಾಗ ದಾನ ಪತ್ರದ ಬಗ್ಗೆ ಗೊತ್ತಾಗಿರುತ್ತದೆ. ಆ ರೀತಿ ಗೊತ್ತಾದ ನಂತರ ನನ್ನ ತಾಯಿಯು ಭಾಗಾಂಶ ಕೋರಿ ದಾವೆಯನ್ನು ಸಲ್ಲಿಸಿರುವುದಿಲ್ಲ. ನನ್ನ ತಾಯಿಯು ದಾನಪತ್ರವನ್ನು ಪ್ರಶ್ನೆ ಮಾಡಿರುವುದಿಲ್ಲ.

6) ದಾವಾ ಸ್ವತ್ತುಗಳು ವಾದಿಯ ಸ್ವಾ ಧೀನಾನುಭಕ್ಕೆ ಒಳಪಟ್ಟಿತ್ತು ಎಂದರೆ ಸರಿ. ಬೇರೆಯವರಿಗೆ ಸದರಿ ಸ್ವತ್ತುಗಳನ್ನು ವಿಲೇವಾರಿ ಮಾಡುವ ಅಧಿಕಾರ ವಾದಿಗೆ ಇತ್ತು ಎಂದರೆ ಸರಿ. ದಾನ ಪತ್ರದ ಬಗ್ಗೆ ಪೂರ್ವದಲ್ಲಿ ಮಾತುಕತೆ ಮಾಡಲು ಎಲ್ಲಿ ಸೇರಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ದಾನಪತ್ರವು ಎಲ್ಲಿ ನೊಂದಣಿ ಅಗಿರುತ್ತದೆ ಮತ್ತು ಆ ದಿನ ಎಲ್ಲಿ ಸದರಿ ದಾಖಲೆಯನ್ನು ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಾನಪತ್ರದ ಪ್ರತಿಯನ್ನು ನಾನೇ ಪಡೆದಿರುತ್ತೇನೆ. ಈ ದಾವೆಗೆ ಸಲ್ಲಿಸಿರುವ ಉಳಿದ ದಾಖಲೆಗಳನ್ನು ನಾನೇ ಪಡೆದಿರುತ್ತೇನೆ. ಈ ದಾವೆ ತಯಾರು ಮಾಡಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ ಎಂದರೆ ವಾದಿಯು ನೀಡಿರುತ್ತಾರೆ. ವಾದಿಯು ಆ ರೀತಿ ಮಾಹಿತಿ ನೀಡಿದಾಗ ನಾನು ಅವರ ಜೊತೆ ಇದ್ದೆ. ಆದರೆ ದಿನಾಂಕ ಹೇಳಲಾಗುವುದಿಲ್ಲ. ಸದರಿ ಕಾಲಕ್ಕೆ ಬೇರೆ ಯಾರು ಇರಲಿಲ್ಲ. ವಾದಿಗೆ ಈ ದಾವೆ ಸಲ್ಲಿಸಲು ಇಚ್ಚೆ ಇಲ್ಲದೇ ಇದ್ದರು ಅವರು ದಾವೆ ಸಲ್ಲಿಸಲು ಮಾಹಿತಿ ನೀಡದೇ ಇದ್ದರೂ ನಾನು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ವಾದಿಗೆ ದಾವೆ ನಡೆಸಲು ಇಚ್ಚೆ ಇಲ್ಲದೇ ಇದ್ದರು ನಿಪಿ-1 ನ್ನು ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಕುಟುಂಬದ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಮತ್ತು ಅವರು ಯಾವ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ ನನ್ನ ಅಜ್ಜಿಯು ಮಾರಾಟ ಮಾಡಿದ

ಸ್ವತ್ತುಗಳ ಸಂಬಂದವಾಗಿ ದಾಖಲೆ ಹಾಜರುಪಡಿಸಲು ಅಗುವುದಿಲ್ಲ. ವಾದಿಯು ಮಾರಾಟ ಮಾಡಿರುವ ಸ್ವತ್ತುಗಳ ಸಂಬಂದವಾಗಿ ನನ್ನ ತಾಯಿಯು ಸಹಿ ಮಾಡಿದ್ದು, ಅದ್ದರಿಂದ ದಾಹಲೆ ಹಾಜರುಪಡಿಸಲು ಸಾದ್ಯವಿಲ್ಲವೆಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಜ್ಜಿಯು ಒಂದು ಸ್ವತ್ತನ್ನು ಮಾರಾಟ ಮಾಡಿರುವ ಬಗ್ಗೆ ಮಾತ್ರ ಗೊತ್ತಿರುತ್ತದೆ. ಉಳಿದ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

7) ವಾದಿಯು ಈಗ ನನ್ನ ಜೊತೆಯಲ್ಲಿ ಬೆಂಗಳೂರಿನಲ್ಲಿ ಇರುತ್ತಾರೆ. ವಾದಿಯನ್ನು ಹೊರಗಡೆ ಕಳುಹಿಸದೇ ಬಲವಂತವಾಗಿ ನನ್ನ ಮನೆಯಲ್ಲಿ ಇರಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯನ್ನು ನ್ಯಾಯಾಲಯಕ್ಕೆ ಕರೆಸಿ ನಿಪಿ-1 ರ ಬಗ್ಗೆ ಹೇಳಿಸಲು ಸಾದ್ಯವೇ ಎಂದರೆ ಅವರನ್ನು ಕರೆದುಕೊಂಡು ಬರುತ್ತೇನೆ ಅದರೆ ಅವರು ಮಾತನಾಡುವುದಿಲ್ಲ ಮತ್ತು ಅವರಿಗೆ ಕಿವಿ ಕೇಳಿಸುವುದಿಲ್ಲ. ಆ ರೀತಿ ಇದ್ದರು ಸಹ ನಾನು ನಿಪಿ-1 ನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಈಗ 85 ವರುಷ ವಯಸ್ಸು ಅಗಿರುತ್ತದೆ. ದಾನ ನೀಡಿದ ಸ್ವತ್ತುಗಳಲ್ಲಿ ಪ್ರತಿವಾದಿಯು ವ್ಯವಸಾಯ ಮಾಡುತ್ತಾರೆ ಎಂದರೆ ಹೌದು ಎಂದು ಸಾಕ್ಷಿಯು ಮುಂದುವರೆದು ನಾನು ವ್ಯವಸಾಯ ಮಾಡುತ್ತೇನೆಂದು ನುಡಿಯುತ್ತಾರೆ. ನಾನು ವ್ಯವಸಾಯ ಮಾಡಲು ವಾದಿಯು ನನಗೆ ಹೇಳಿದ್ದರು. ಆ ಸಂಬಂದವಾಗಿ ವಾದಿಯಿಂದ ದಾಖಲೆ ಬರೆಸಿಕೊಂಡಿರುವುದಿಲ್ಲ. ಖಾತೆ ಬದಲಾವಣೆ ಮಾಡಿಸುತ್ತಾರೆಂದು ಗೊತ್ತಾದಾಗ ಜಮೀನನ್ನು ಬಿಡಬೇಡವೆಂದು ನೀನೆ ವ್ಯವಸಾಯ ಮಾಡಿಸುವಂತೆ ವಾದಿಯು ನನಗೆ ಹೇಳಿರುತ್ತಾರೆ. ನಾನು ಸದರಿ ಕಾಲಕ್ಕೆ ವಾದಿಯಿಂದ ದಾಖಲೆ ಬರೆಸಿಕೊಳ್ಳಲು ತೊಂದರೆ ಇರಲಿಲ್ಲ.

ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ